S. C. No.10 /2019
PW.03

**ಪ್ರಾ.ಸಾ. : 03**

**ದಿನಾಂಕಃ 30-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಲ್.ಎಸ್.ಕೆ ವಕೀಲರಿಂದ**

17. ಪೋಲಿಸರು ಹೇಳಿದ ಪ್ರಕಾರ ದಿಃ 12-01-2024 ರಂದು ಹಾಗೂ ದಿಃ 31-01-2024 ರಂದು ಚಾಸಾ-4 ಮತ್ತು 3 ರವರನ್ನು ನಾನೇ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಆದರೆ ಆ ದಿನಗಳಲ್ಲಿ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ. ಆ ದಿನಗಳಂದು ನ್ಯಾಯಾಲಯದಿಂದ ನನಗೆ ಯಾವುದೇ ಸಮನ್ಸ ಬರದೆ ಇದ್ದರೂ ಸಹ ಸಾಕ್ಷಿಗಳನ್ನು ನಾನೇ ಕರೆದುಕೊಂಡು ಬಂದು, ಅವರಿಗೆ ಇದೇ ರೀತಿ ಸಾಕ್ಷಿ ಹೇಳಬೇಕೆಂದು, ಹೇಳಿಕೊಟ್ಟು, ಸಾಕ್ಷಿ ನುಡಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣ ಪ್ರಾರಂಭವಾದಾಗಿನಿಂದ ಈ ವರೆಗೆ ನಾನು ಸುಮಾರು 10 ಸಲ ನ್ಯಾಯಾಲಯಕ್ಕೆ ಬಂದಿರುತ್ತೇನೆ, ಆದರೆ ಕೆಲವು ದಿನಗಳಂದು ವಿಚಾರಣೆ ಆಗಿರುವುದಿಲ್ಲ.

18. ಮೃತ ಪ್ರೇಮಕುಮಾರನ ಕುಟುಂಬವು ಯಾವ ರೀತಿಯ ಪಡಿತರ ಚೀಟಿಯನ್ನು ಹೊಂದಿದ್ದರು ಎಂದು ನನಗೆ ಗೊತ್ತಿಲ್ಲ. ಅವರ ಬಳಿ ಬಿಪಿಎಲ್ ಪಡಿತರ ಚೀಟಿಯಿತ್ತು ಎಂದರೆ ನನಗೆ ಗೊತ್ತಿಲ್ಲ. ಮೃತ ಪ್ರೇಮಕುಮಾರನು ತೆರಿಗೆ ಭರಿಸುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಮೃತ ಪ್ರೇಮಕುಮಾರನಿಗೆ ಯಾವ-ಯಾವ ಮೂಲಗಳಿಂದ ಆದಾಯ ಇತ್ತು ಎಂದರೆ ಸಾಕ್ಷಿಯು ಆತ ಪೊಯಿನೂರು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಹಾಗೂ ಕಟ್ಟಿಗೆಯ ವ್ಯಾಪಾರ ಮಾಡುತ್ತಿದ್ದ ಎಂದು ನುಡಿಯುತ್ತಾರೆ. ಆತನಿಗೆ ಪ್ರತಿ ತಿಂಗಳು ಎಷ್ಟು ಆದಾಯ ಇತ್ತು ಎಂದು ನನಗೆ ಗೊತ್ತಿಲ್ಲ. ಮೃತ ಪ್ರೇಮಕುಮಾರನ ಹೆಂಡತಿ ಈಗ ಬೇರೆ ಮದುವೆಯಾಗಿ ವಾಸವಾಗಿರುತ್ತಾರೆ. ಮದುವೆಯಾಗಿ ಈಗ 1 ವರ್ಷ ಆಗಿರುತ್ತದೆ ಹಾಗೂ ಆಕೆಯ 2 ನೇ ಗಂಡ ಬಂದರಿನಲ್ಲಿ ಆಫೀಸರ್ ಆಗಿ ಕೆಲಸ ಮಾಡುತ್ತಾನೆ. ಚಾಸಾ-25 ರವರಿಗೂ ಹಾಗೂ ನನ್ನ ತಮ್ಮ ಮೃತ ಪ್ರೇಮಕುಮಾರನಿಗೂ ಕೆಲಸದ ವಿಷಯವಾಗಿ ಪರಿಚಯವಾಗಿರುತ್ತಾರೆ. ಚಾಸಾ-25 ರವರು ಈಗ ಎಲ್ಲಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ನನ್ನ ತಮ್ಮನ ಕೊಲೆಯಾಗುವ 6 ತಿಂಗಳು ಮೊದಲು ಚಾಸಾ-25 ರವನ್ನು ನಾನು ಭೇಟಿಯಾಗಿರುತ್ತೇನೆ. ಕೊಲೆಯಾದ 2 ತಿಂಗಳುಗಳು ನಂತರ ಮತ್ತೆ ಭೇಟಿಯಾಗಿರುತ್ತೇನೆ. ಆ ನಂತರ ಪುನಃ ನಾನು ಅವರನ್ನು ಭೇಟಿಯಾಗಿರುವುದಿಲ್ಲ. ಪ್ರೇಮಕುಮಾರನ ಕೊಲೆಯಾದ ನಂತರ ಚಾಸಾ-25 ರವರು ತನ್ನ

ಕಂಪನಿಯನ್ನು ಮುಚ್ಚಿ ಮಂಗಳೂರಿಗೆ ಹೋದರು ಎಂದರೆ ನನಗೆ ಗೊತ್ತಿಲ್ಲ. ಈ ವಿಷಯ ನನಗೆ ಗೊತ್ತಿದ್ದರೂ ಸಹ ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

19. ಮೃತ ಪ್ರೇಮಕುಮಾರನು ಮನೆ ಬಿಟ್ಟು ಹೋದ ದಿನ ರಾತ್ರಿ 11-30 ಗಂಟೆಗೆ ಆತನ ಹೆಂಡತಿ ನಮಗೆ ಕರೆ ಮಾಡಿ, ಪ್ರೇಮಕುಮಾರ ಮನೆಗೆ ಬಂದಿಲ್ಲ ಹಾಗೂ ಕರೆಗಳನ್ನು ಸ್ವೀಕರಿಸುತ್ತಿಲ್ಲ ಎಂದು ಹೇಳಿರುತ್ತಾಳೆ. ಆಕೆ ಕರೆ ಮಾಡಿದ ನಂಬರ ನನಗೆ ಗೊತ್ತಿಲ್ಲ. ಆಗ ನಾವು ಪ್ರೇಮಕುಮಾರನ ಮನೆಗೆ ಹೋಗಿ, ಆ ನಂತರ ನಾವು ಪೋಲಿಸ್ ಠಾಣೆಗೆ ರಾತ್ರಿ 12-00 ಗಂಟೆಗೆ ಹೋಗಿರುತ್ತೇವೆ. ಆ ಸಮಯದಲ್ಲಿ ಠಾಣೆಯಲ್ಲಿ ಪೋಲಿಸರು ಇದ್ದರು, ನಾವು ದೂರನ್ನು ನೀಡಿರುತ್ತೇವೆ. ದೂರನ್ನು ಪೋಲಿಸರೇ ಬರೆದಿರುತ್ತಾರೆ ಹಾಗೂ ಸದರಿ ದೂರಿಗೆ ಚಾಸಾ-1 ರವರು ಸಹಿ ಮಾಡಿರುತ್ತಾರೆ. ಸದರಿ ದೂರಿನಲ್ಲಿ ಪೋಲಿಸರು ಏನೇನು ಬರೆಯಲಾಗಿದೆ ಎಂಬ ಮಾಹಿತಿ ನನಗೆ ಇರುತ್ತದೆ. ದೂರು ಕೊಟ್ಟ ಬಳಿಕ ಪೋಲಿಸರು ನಮಗೆ ಬೆಳಿಗ್ಗೆ ಬರುವಂತೆ ಹೇಳಿರುತ್ತಾರೆ. ಆ ನಂತರ ದಿಃ 21-10-2018 ರಂದು ಚಾಸಾ-1 ರವರು ಪುನಃ ದೂರನ್ನು ನೀಡಿರುತ್ತಾರೆ, ಆಗ ಸಮಯ ಬೆಳಿಗ್ಗೆ ಸುಮಾರು 11-00 ಗಂಟೆಯಾಗಿರುತ್ತದೆ. ಆ ದೂರನ್ನೂ ಸಹ ಪೋಲಿಸರು ಬರೆದಿರುತ್ತಾರೆ ಹಾಗೂ ಸದರಿ ದೂರಿಗೆ ಚಾಸಾ-1 ರವರು ಸಹಿ ಮಾಡಿರುತ್ತಾರೆ. ದಿಃ 16-10-2018 ರಿಂದ ದಿಃ 21-10-2018 ರ ವರೆಗೆ ನಾನು ಕಾರವಾರ ಪೋಲಿಸ್ ಠಾಣೆಗೆ ಸುಮಾರು 15 ಸಲ ಹೋಗಿರುತ್ತೇನೆ. ದಿಃ 16-10-2018 ರಂದು 1 ಸಲ, ದಿಃ 17-10-2018 ರಂದು 4 ಸಲ, ದಿಃ 20-10-2018 ರಂದು 3 ಸಲ, ದಿಃ 21-10-2018 ರಂದು 4 ಸಲ ಹೋಗಿರುತ್ತೇನೆ.

20. ನನ್ನೊಂದಿಗೆ ಸತಾರಕ್ಕೆ ಬಂದ ಪ್ರೇಮಕುಮಾರನ 2 ಜನ ಸ್ನೇಹಿತರ ಪೈಕಿ ಒಬ್ಬನ ಹೆಸರು ಪ್ರಶಾಂತ ಹಾಗೂ ಇನ್ನೊಬ್ಬನು ಬಂದಿರಲಿಲ್ಲ. ನಮ್ಮೊಂದಿಗೆ ಸತಾರಕ್ಕೆ ಬಂದ ಪೊಲೀಸರ ಹೆಸರು ಮಂಜು ಮತ್ತು ರಾಜೇಶ ಆಗಿರುತ್ತದೆ. ನಾವು ಬಾಡಿಗೆ ಕಾರನ್ನು ತೆರೆದುಕೊಂಡು ಹೋಗಿದ್ದು, ಅದರ ಚಾಲಕನ ಹೆಸರು ನನಗೆ ಗೊತ್ತಿಲ್ಲ. ಸದರಿ ಬಾಡಿಗೆ ಕಾರಿನ ನಂಬರ ನನಗೆ ಗೊತ್ತಿಲ್ಲ. ನಾವು ಕಾರಿನಲ್ಲಿ 3 ದಿನ ಓಡಾಡಿರುತ್ತೇವೆ. ಪ್ರೇಮಕುಮಾರನ ಮೊಬೈಲ್ ಟವರ್ ಲೋಲೊಕೇಷ್ ಗೆ ಸಂಬಂಧಿಸಿದಂತೆ ನಕಾಶೆಯನ್ನು ತೆಗೆದುಕೊಂಡು ಹೋಗಿರುತ್ತೇವೆ. ಲೊಕೇಷನ್ ತೋರಿಸುತ್ತಿದ್ದ ಸತಾರದ ಜಾಗದ ಹೆಸರು ನನಗೆ ಗೊತ್ತಿಲ್ಲ, ಆದರೆ ಅದು ನಗರ ಪ್ರದೇಶದಿಂದ 5 ಕಿ.ಮೀ ದೂರದಲ್ಲಿತ್ತು, ಅದು ಹಳೆಯ ಕಾರ್ಖಾನೆಯ ಜಾಗವಾಗಿದ್ದು, ಅದು

ಮುಚ್ಚಿತ್ತು. ಸದರಿ ಕಾರ್ಖಾನೆ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ನಮ್ಮ ಜೊತೆ ಸತಾರದ ಒಬ್ಬರು ಪೋಲಿಸರು ಲೊಕೇಷನ್ ಜಾಗಕ್ಕೆ ಬಂದಿದ್ದರು, ಅವರ ಹೆಸರು ನನಗೆ ಗೊತ್ತಿಲ್ಲ. ಸ್ಥಳದಲ್ಲಿ ಪ್ರೇಮಕುಮಾರನ ಮೊಬೈಲ್ ಸಿಕ್ಕಿರುವುದಿಲ್ಲ. ಆ ನಂತರ ಲೊಕೇಷನ್ ನ್ನು ಚೆಕ್ ಮಾಡಿರುವುದಿಲ್ಲ. ಕಾರವಾರದಿಂದ ಸತಾರ ಸುಮಾರು 450 ಕಿ.ಮೀ ದೂರ ಇರುತ್ತದೆ.

21. ದಿಃ 17-10-2018 ರಂದು ರಾತ್ರಿ 11-00 ಗಂಟೆಗೆ ಕಾರವಾರವನ್ನು ಬಿಟ್ಟು, ಬೆಳಗಾವಿ ಮಾರ್ಗವಾಗಿ ಸತಾರಕ್ಕೆ ಹೋಗಿರುತ್ತೇವೆ. ಕಾರವಾರದಿಂದ ಬೆಳಗಾವಿಗೆ ಹೋಗಲು ಸುಮಾರು 5 ತಾಸು ಆಗಿರುತ್ತದೆ. ಬೆಳಗಾವಿಯಿಂದ ಸತಾರಕ್ಕೆ ಹೋಗಲು ಎಷ್ಟು ಸಮಯ ಬೇಕಾಗುತ್ತದೆ ಎಂದು ನನಗೆ ಗೊತ್ತಿಲ್ಲ. ನಾವು ಸತಾರಕ್ಕೆ ಹೋಗಿರುವುದಿಲ್ಲ ಹಾಗೂ ನನ್ನ ಮುಖ್ಯ ವಿಚಾರಣೆಯಲ್ಲಿ ಸತಾರಕ್ಕೆ ಹೋಗಿದ್ದೇವು ಎಂದು ಸುಳ್ಳು ಸಾಕ್ಷ್ಯ ಹೇಳಿದ್ದೇನೆ ಎಂದರೆ ಸರಿಯಲ್ಲ. ನಾವು ಕೊಲ್ಲಾಪುರಕ್ಕೆ ಹೋದಾಗ ಬೆಳಿಗ್ಗೆ 08-00 ಗಂಟೆ ಆಗಿರುತ್ತದೆ. ಕೊಲ್ಲಾಪುರದ ಟ್ರಾವೇಲ್ ಏಜೆನ್ಸಿ ಯಾವ ಜಾಗದಲ್ಲಿತ್ತು ಎಂದು ನನಗೆ ಹೇಳಲಾಗುವುದಿಲ್ಲ. ಸದರಿ ಟ್ರಾವೇಲ್ ಏಜೆನ್ಸಿಯ ಹೆಸರು ಶಿವಶಕ್ತಿ ಟ್ರಾವೇಲ್ಸ್ ನಾವು ಅಲ್ಲಿಗೆ ಹೋದಾಗ ಟ್ರಾವೇಲ್ ಏಜೆನ್ಸಿ ತೆರೆದಿರುತ್ತದೆ. ಟ್ರಾವೇಲ್ ಏಜೆಂಟನ ಹೆಸರು ಗೊತ್ತಿಲ್ಲ. ಟ್ರಾವೇಲ್ ಏಜೆನ್ಸಿಯಲ್ಲಿ ಪೋಲಿಸರು ಯಾವುದೇ ದಾಖಲೆಗಳನ್ನು ವಶಪಡಿಸಿಕೊಂಡಿರುವುದಿಲ್ಲ. ಮುಸ್ತಾಕ್ ಏಜೆಂಟರವರ ಪೋನ್ ನಿಂದ ಯಾವ-ಯಾವ ನಂಬರಳಿಗೆ ಕರೆ ಮಾಡಿದ್ದ ಎಂದು, ನನಗೆ ಹೇಳಲು ಬರುವುದಿಲ್ಲ. 2 ನೇ ಆರೋಪಿಯು ಕೊಲ್ಲಾಪುರದಿಂದ ಮುಂಬೈಗೆ ಟಿಕೇಟ್ ಬುಕ್ ಮಾಡಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. 2 ನೇ ಆರೋಪಿಯು ದಿಃ 18-10-2018 ರಂದು ಬೆಳಿಗ್ಗೆ 08-00 ಗಂಟೆಯ ಬಸ್ ಗೆ ಬೆಳಗಿನ ಸಮಯದಲ್ಲಿ ಟಿಕೇಟ್ ಬುಕ್ ಮಾಡಿರುತ್ತಾನೆ. ಆತ ಪ್ರಯಾಣ ಮಾಡಿದ ಬಗ್ಗೆ ಟ್ರಾವೇಲ್ ಏಜೆನ್ಸಿಯಲ್ಲಿ ಮಾಹಿತಿ ಸಿಕ್ಕಿರುತ್ತದೆ. ಸದರಿ ಮಾಹಿತಿಯನ್ನು ಪೋಲಿಸರು ನನ್ನ ಮುಂದೆ ಪಡೆದುಕೊಂಡಿರುತ್ತಾರೆ.

22. 2 ನೇ ಆರೋಪಿಯನ್ನು ಪತ್ತೆ ಹಚ್ಚಲು ಪೊಲೀಸರು ಮುಂಬೈಗೆ ಹೋಗಿರುವುದಿಲ್ಲ. ಆತ ಮುಂಬೈಗೆ ಹೋದ ವಿಚಾರವನ್ನು ನಮ್ಮೊಂದಿಗೆ ಇದ್ದ ಪೋಲಿಸರು, ಅವರ ಮೇಲಾಧಿಕಾರಿಳಿಗೆ ತಿಳಿಸಿದ ಬಗ್ಗೆ ನನಗೆ ಮಾಹಿತಿ ಇಲ್ಲ. 2 ನೇ ಆರೋಪಿ ಟ್ರಾವೇಲ್ ಏಜೆಂಟ್ ಪೋನಿನ ಮೂಲಕ ಯಾರ-ಯಾರಿಗೆ ಎಷ್ಟು ಸಮಯ ಕಾಲ ಪೋನ್ ಮಾಡಿದ್ದ ಎಂಬ ಬಗ್ಗೆ ಮಾಹಿತಿ ಇದೆಯಾ

ಎಂದರೆ ಸಾಕ್ಷಿಯು ಯಾರು-ಯಾರೊಂದಿಗೆ ಎಷ್ಟು ಸಮಯ ಮಾತನಾಡಿದ್ದ ಎಂದು ಗೊತ್ತಿಲ್ಲ, ಆದರೆ 18 ನಿಮಿಷಗಳ ಕಾಲ ಮಾತನಾಡಿರುತ್ತಾನೆ ಎಂದು ನುಡಿಯುತ್ತಾರೆ. ನಾವು ಕೊಲ್ಲಾಪುರದ ಟ್ರಾವೇಲ್ ಏಜೆನ್ಸಿಗೆ ಹೋಗಿ, 2 ನೇ ಆರೋಪಿಯ ಬಗ್ಗೆ ವಿಚಾರಿಸಿದಾಗ, ಆತ ಪೋನ್ ಮೂಲಕ ಮಾತನಾಡಿದ್ದ ಹಾಗೂ ಟಿಕೇಟ್ ಬುಕ್ ಮಾಡಿಕೊಂಡು, ಮುಂಬೈಗೆ ಹೋದ ಎಂಬ ವಿಷಯ ತಿಳಿದು ಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಕೊಲ್ಲಾಪುರಕ್ಕೆ ಹೋಗಿಲ್ಲ ಹಾಗೂ ಪೋಲಿಸರು ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

23. ನಾವು ಖಾನಾಪುರದ ಪೋಲಿಸ್ ಠಾಣೆಗೆ ಹೋದಾಗ ಅಲ್ಲಿ ಇನ್ಸಪೆಕ್ಟರ ಇದ್ದರಾ? ಎಂದರೆ ಸಾಕ್ಷಿಯು ಪೋಲಿಸರು ಇದ್ದರು ಎಂದು ನುಡಿಯುತ್ತಾರೆ. ಖಾನಾಪುರದ ಪೋಲಿಸ್ ಠಾಣೆಯಲ್ಲಿ ಸುಮಾರು 2 ತಾಸುಗಳ ಕಾಲ ಇದ್ದೇವು. ಚಾಸಾ-32 ರವರನ್ನು ಖಾನಾಪುರದ ಪೋಲಿಸರು ಕರೆದುಕೊಂಡು ಬಂದಿರುತ್ತಾರೆ. ಅವರ ಹೆಸರು ನನಗೆ ಗೊತ್ತಿಲ್ಲ. ಆಗ ರಾತ್ರಿ 01-00 ಗಂಟೆಯಾಗಿತ್ತು. 2 ನೇ ಆರೋಪಿ ಖಾನಾಪುರದ ಗ್ಯಾರೇಜನಲ್ಲಿ ನಿಲ್ಲಿಸಿದ ಕಾರಿನ ಬಣ್ಣ ಮೆಟಾಲಿಕ್ ಬಣ್ಣದ್ದಾಗಿರುತ್ತದೆ. ನಮ್ಮೊಂದಿಗೆ ಇದ್ದ ಪೋಲಿಸರು ಬೆಳಿಗ್ಗೆ ಗ್ಯಾರೇಜ್ ಗೆ ಹೋಗಿ, ಕಾರನ್ನು ನೋಡಿರುತ್ತಾರೆ. ಅದೇ ದಿನ ಪೋಲಿಸರು ಆ ಕಾರನ್ನು ಖಾನಾಪುರದಿಂದ ಕಾರವಾರ ಪೊಲೀಸ್ ಠಾಣೆಗೆ ತೆಗೆದುಕೊಂಡು ಬಂದಿರುತ್ತಾರೆ. ನಾವು ತೆಗೆದುಕೊಂಡು ಹೋಗಿದ್ದ ಕಾರಿನಲ್ಲಿ ಖಾನಾಪುರದಿಂದ ಕಾರವಾರಕ್ಕೆ ನಾನು, ಕಾರಿನ ಚಾಲಕ, ಚಾಸಾ-20 ಹಾಗೂ ಇನ್ನೊಬ್ಬ ಪ್ರಶಾಂತ ಬಂದಿರುತ್ತೇವೆ. ಪೋಲಿಸರು ತಂದ ಜೆನ್ ಕಾರಿನಲ್ಲಿ ಪೋಲಿಸರು, 2 ನೇ ಆರೋಪಿಯ ಅಕ್ಕ ಮತ್ತು ತಮ್ಮ ಬಂದಿರುತ್ತಾರೆ. ಅವರನ್ನು ದಾಂಡೇಲಿಯಿಂದ ಕರೆದುಕೊಂಡು ಬಂದಿರುತ್ತಾರೆ. 2 ಮತ್ತು 3 ನೇ ಆರೋಪಿತರನ್ನು ಪೋಲಿಸರು ವಶಪಡಿಸಿಕೊಂಡು ದಸ್ತಗಿರಿ ಮಾಡಿರುತ್ತಾರೆ. ಅವರನ್ನು ದಸ್ತಗಿರಿ ಮಾಡಿದಾಗ ಬೆಳಗಿನ ಸಮಯವಾಗಿತ್ತು.

24. ದಿಃ 23-10-2018 ರಂದು ಪೋಲಿಸ್ ಠಾಣೆಗೆ ಕರೆಸಿದ 2 ಜನ ಪಂಚರು, ಚಾಸಾ-1 ರವರ ಪರಿಚಯಸ್ಥರು ಎಂದರೆ ನನಗೆ ಗೊತ್ತಿಲ್ಲ. ಸದರಿ 2 ಜನ ಪಂಚರ ಪೈಕಿ ಒಬ್ಬನು ಪ್ರವೀಣ ಮತ್ತೊಬ್ಬನು ಸೂರಜ. ದಿಃ 23-10-2018 ರ ಬೆಳಿಗ್ಗೆ 2 ಮತ್ತು 3 ನೇ ಆರೋಪಿತರನ್ನು ಕರೆದುಕೊಂಡು ಬಂದಾಗ ಒಬ್ಬರು ಡಿ.ವೈ.ಎಸ್ಪಿ., ಸಿಪಿಐ., ಪಿಎಸ್ಐ., ಎಎಸ್ಐ ಹಾಗೂ ಇತರೇ ಪೋಲಿಸರು ಇದ್ದರು. 2 ಮತ್ತು 3 ನೇ ಆರೋಪಿತರನ್ನು ವಿಚಾರಣೆ ಮಾಡುವ ಕಾಲಕ್ಕೆ 7-8 ಮಂದಿ ಇದ್ದರು. ಪೋಲಿಸರು ಆರೋಪಿತರನ್ನು ವಿಚಾರಣೆ ಮಾಡುವಾಗ ನಾವು ಪಿಎಸ್ಐ

ಕೊಠಡಿಯಲ್ಲಿ ಇರಲಿಲ್ಲ. ಆದ್ದರಿಂದ ಪೋಲಿಸರು ಯಾವ ವಿಚಾರವನ್ನು ವಿಚಾರಣೆಯನ್ನು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 2 ಮತ್ತು 3 ನೇ ಆರೋಪಿತರು ನಮ್ಮ ಸಮಕ್ಷಮ ಪೋಲಿಸರ ಮುಂದೆ ತಪ್ಪೊಪ್ಪಿಕೊಂಡಿದ್ದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರನ್ನು ಪೋಲಿಸ ಠಾಣೆಯಲ್ಲಿ ನೋಡುವ ಮೊದಲು ನೋಡಿದ್ದಿರಾ ? ಎಂದರೆ ಸಾಕ್ಷಿಯು 2 ನೇ ಆರೋಪಿಯನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. 2 ನೇ ಆರೋಪಿಯನ್ನು 2006 ರಿಂದ ಬೈತಕೊಲನಲ್ಲಿ ನೋಡಿರುತ್ತೇನೆ. ಆತ 1 ನೇ ಆರೋಪಿ ಬಳಿ ಕೆಲಸ ಮಾಡುತ್ತಿದ್ದನು. 2 ನೇ ಆರೋಪಿಯನ್ನು ನಾನು ಈ ಮೊದಲು ನೋಡದೆ ಇದ್ದರೂ ಸಹ ನೋಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿತನು 1 ನೇ ಆರೋಪಿನ ಬಳಿ ಏನು ಕೆಲಸ ಮಾಡುತ್ತಿದ್ದ ಹಾಗೂ ಎಷ್ಟು ಸಂಬಳ ಪಡೆಯುತ್ತಿದ್ದ ಎಂಬ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಆರೋಪಿತನ ಬಳಿ ಎಷ್ಟು ಜನ ಕೆಲಸಗಾರರು ಇದ್ದರು ಎಂದು ನನಗೆ ಗೊತ್ತಿಲ್ಲ. 1 ನೇ ಆರೋಪಿ ಬೈತಕೊಲದಲ್ಲಿ ಕಬ್ಬಿಣದ ಅದಿರಿನ ಲೋಡಿಂಗ್ ಮತ್ತು ಅನ್ ಲೋಡಿಂಗ ಮಾಡುತ್ತಿದ್ದ.

25. 2006 ರಿಂದ 2015 ರ ವರೆಗೆ 1 ನೇ ಆರೋಪಿ ಹಾಗೂ ಪ್ರೇಮಕುಮಾರು ಬೇರೆ ಬೇರೆ ಕೆಲಸ ಮಾಡುತ್ತಿದ್ದರು. ಆ ನಂತರ ಅವರಿಬ್ಬರೂ ಒಟ್ಟಿಗೆ ಕೆಲಸ ಮಾಡುತ್ತಿದ್ದರು. ಅವರಿಬ್ಬರೂ ಒಟ್ಟಿಗೆ ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. 1 ನೇ ಆರೋಪಿ ಹಾಗೂ ಪ್ರೇಮಕುಮಾರನ ನಡುವೆ ಕೆಲಸದ ವಿಷಯವಾಗಿ ವೈಷ್ಯಮ ಇತ್ತು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿತನು 1 ನೇ ಆರೋಪಿತನ ಬಳಿ ಕೆಲಸ ಮಾಡುತ್ತಿದ್ದನು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿಗಳಿಗೆ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ತನ್ನ ಊರಿನಲ್ಲಿ ಚಾಲಕ ಕೆಲಸ ಮಾಡುತ್ತಿದ್ದ ಎಂದರೆ ಸಾಕ್ಷಿಯು ಇಲ್ಲಿಯೂ ಸಹ ಚಾಲಕ ವೃತ್ತಿಯನ್ನು ಮಾಡುತ್ತಿದ್ದ ಎಂದು ನುಡಿಯುತ್ತಾರೆ.

26. ಆಕಳು ಗವಿಯ ಕಾಡು ದಾರಿಯಲ್ಲಿ ಯಾವುದೇ ಗಾಡಿಗಳು ಹೋಗಲು ಆಗುವುದಿಲ್ಲ ಎಂದರೆ ಸಾಕ್ಷಿಯು ಬೈಕ್ ಹೋಗುತ್ತದೆ ಎಂದು ನುಡಿಯುತ್ತಾರೆ. ಆದರೆ ಆ ಜಾಗದಲ್ಲಿ ಯಾವುದೇ ಗುರುತುಗಳು ಕಾಣಲಿಲ್ಲ. ಶವ ಬಿದ್ದ ಸ್ಥಳಕ್ಕೆ ಹೋದಾಗ ಮದ್ಯಾಹ್ನ 12−15 ಗಂಟೆಯಾಗಿತ್ತು. ಘಟನಾ ಸ್ಥಳಗಳಲ್ಲಿ ಪಂಚನಾಮೆಗಳನ್ನು ಮುಗಿಸಿ ಸಂಜೆ 05−30 ಗಂಟೆಗೆ ವಾಪಸು ಬಂದಿರುತ್ತೇವೆ. ಘಟನಾ ಸ್ಥಳಗಳ ಪಂಚನಾಮೆಗಳನ್ನು ಹಾಗೂ ವಾಹನಗಳ ಜಪ್ತು

ಪಂಚನಾಮೆಯನ್ನು ಪೋಲಿಸರೇ ಬರೆದಿರುತ್ತಾರೆ. ಸದರಿ ಪಂಚನಾಮೆಗಳನ್ನು ಕೈಯಲ್ಲಿ ಬರೆದಿರುತ್ತಾರೆ ಹಾಗೂ ಲ್ಯಾಪ್ ಟಾಪ್ ಮೂಲಕ ಟೈಪ್ ಮಾಡಿರುತ್ತಾರೆ. ಪೋಲಿಸರು ತಮ್ಮ ಜೊತೆ ಪ್ರಿಂಟರ್ ತಂದ ಬಗ್ಗೆ ನನಗೆ ಗೊತ್ತಿಲ್ಲ. ಪಂಚನಾಮೆಯ ಕಾಲಕ್ಕೆ ತೆಗೆದ ಪೋಟೋಗಳಲ್ಲಿ ನಾನು ಇರುವುದಿಲ್ಲ ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ಪೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಶವವನ್ನು ಹಸ್ತಾಂತರಿಸುವ ರಶೀದಿಯ ಮೇಲೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಶವ ಹಸ್ತಾಂತರಿಸುವ ರಶೀದಿಯು ಪ್ರಿಂಟೆಡ್ ಪಾರಂ ಆಗಿರುತ್ತದೆ. ಶವ ಬಿದ್ದ ಸ್ಥಳದಲ್ಲಿ ಮರಣೋತ್ತರ ಪರೀಕ್ಷೆ ಮಾಡುವ ಸಮಯದಲ್ಲಿ ಕಾರವಾರ ಸಿವಿಲ್ ಆಸ್ಪತ್ರೆಯಿಂದ ಒಬ್ಬರು ವೈದ್ಯರು ಬಂದಿದ್ದರು. ಶವ ಪರೀಕ್ಷೆಯನ್ನು ಮಾಡುವ ಸಮಯದಲ್ಲಿ ಪೋಟೊಗಳನ್ನು ತೆಗೆದಿರುತ್ತಾರೆ. ವೈದ್ಯರು ಸುಮಾರು 2 ತಾಸುಗಳ ಕಾಲ ಶವ ಪರೀಕ್ಷೆಯನ್ನು ಮಾಡಿರುತ್ತಾರೆ. ಶವ ಪರೀಕ್ಷೆಯ ಕಾಲಕ್ಕೆ ವೈದ್ಯರು ಶವವನ್ನು ಪರೀಕ್ಷಿಸಿ ಪ್ರೇಮಕುಮಾರನು 8 ದಿನಗಳ ಹಿಂದೆ ಮೃತಪಟ್ಟಿರುತ್ತಾನೆ ಎಂದು ತಿಳಿಸಿರುತ್ತಾರೆ. 8 ದಿನಗಳು ಆದ ಕಾರಣ ಮೃತದೇಹ ಊದಿಕೊಂಡಿತ್ತು ಹಾಗೂ ಬಿರುಕು ಬಿಟ್ಟಿತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಮಳೆ ಬರುತ್ತಿದ್ದ ಕಾರಣ ಶವ ಕೊಳೆತ ಸ್ಥಿತಿಯಲ್ಲಿತ್ತು ಎಂದರೆ ಸರಿಯಲ್ಲ. ಶವ ಕೊಳೆತ ಸ್ಥಿತಿಯಲ್ಲಿದ್ದ ಕಾರಣ ಯಾವ ಕಾರಣದಿಂದ ಮೃತಪಟ್ಟಿರುತ್ತಾನೆಂದು ಕಂಡುಹಿಡಿಯಲು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆಕಳು ಗವಿಯ ಅರಣ್ಯ ಪ್ರದೇಶಕ್ಕೆ ಹೋಗಿಲ್ಲ, ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ಶವ ಪರೀಕ್ಷೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಮೃತದೇಹವನ್ನು ಆಸ್ಪತ್ರೆಯಲ್ಲಿ ಹಸ್ತಾಂತರಿಸಿರುತ್ತಾರೆ ಎಂದರೆ ಸಾಕ್ಷಿಯು ಆಕಳು ಗವಿಯ ಅರಣ್ಯ ಪ್ರದೇಶ ಹಸ್ತಾಂತರಿಸಿರುತ್ತಾರೆ ಎಂದು ನುಡಿಯುತ್ತಾರೆ.

27. ಪ್ರೇಮಕುಮಾರನು ದಲಿತ ಸಂಘಟನೆಯಲ್ಲಿ ಅಧ್ಯಕ್ಷನಾಗಿದ್ದ ಎಂದರೆ ಸರಿ. ಸದರಿ ಸಂಘಟಣೆಯ ಮೂಲಕ ಸಾಕಷ್ಟು ಹೋರಾಟಗಳನ್ನು ಮಾಡುತ್ತಿದ್ದನು ಎಂದರೆ ಸರಿ. ಸರಕಾರಿ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ನನ್ನ ತಮ್ಮ ಸಾಕಷ್ಟು ಧರಣಿಗಳನ್ನು ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಬಂದರಿನಲ್ಲಿ ಯಾವುದೇ ರೀತಿಯ ಅವ್ಯವಹಾರಗಳು ನಡೆದರೆ, ಅಲ್ಲಿಯೂ ಸಹ ಪ್ರತಿಭಟನೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ನನ್ನ ತಮ್ಮ ಪ್ರೇಮಕುಮಾರನು ಆ ರೀತಿ ಪ್ರತಿಭಟನೆ ಮಾಡುತ್ತಿದ್ದರಿಂದ ಆತನಿಗೆ ಸಾಕಷ್ಟು ಜನ ವೈರಿಗಳು ಬೆಳೆದಿದ್ದರು ಎಂದರೆ ಸರಿಯಲ್ಲ. ಈ ಕಾರಣದಿಂದಾಗ ಯಾರೋ ಕೊಲೆ ಮಾಡಿ ಅಲ್ಲಿ

ಬಿಸಾಡಿರುತ್ತಾರೆ ಎಂದರೆ ಸರಿಯಲ್ಲ. ನೈಜ ಅಪರಾಧಿಗಳು ಸಿಗದೆ ಇರುವ ಕಾರಣ ಪೋಲಿಸರು ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳು ಸುಳ್ಳಾಗಿರುತ್ತದೆ ಹಾಗೂ ಪೋಲಿಸರ ಹೇಳಿಕೆಯ ಮೇರೆಗೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್ ಪರವಾಗಿ ಶ್ರೀ ಡಿ.ವಿ.ಜಿ ವಕೀಲರಿಂದ**

28. 4 ನೇ ಆರೋಪಿ ವಾಹನದಲ್ಲಿ 1 ನೇ ಆರೋಪಿಯನ್ನು ಗೋವಾ ಕಡೆಗೆ ಕರೆದುಕೊಂಡು ಹೋಗಿದ್ದನ್ನು ನಾನು ನೋಡಿರುವುದಿಲ್ಲ, ಪೋಲಿಸರು ಹೇಳಿದ ಮೇರೆಗೆ ನನಗೆ ತಿಳಿದು ಬಂದಿರುತ್ತದೆ. 4 ನೇ ಆರೋಪಿಯು ವಾಹನದಲ್ಲಿ 1 ನೇ ಆರೋಪಿಯನ್ನು ಎಂದಿಗೂ ಸಹ ಗೋವಾ ಕಡೆಗೆ ಕರೆದುಕೊಂಡು ಹೋಗಿಲ್ಲ ಹಾಗೂ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೊಲೆ ಮಾಡಿದ ವಿಷಯವನ್ನು 1 ನೇ ಆರೋಪಿತನು 4 ಮತ್ತು 5 ನೇ ಆರೋಪಿತರಿಗೆ ತಿಳಿಸಿದ್ದ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸರ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್. ವಕೀಲರ ಪರವಾಗಿ ಶ್ರೀ ಕೆ.ಜಿ.ಟಿ. ವಕೀಲರಿಂದ**

29. ಪ್ರೇಮಕುಮಾರನ ಕೊಲೆಯಾದ ವಿಷಯನ್ನು 1 ನೇ ಆರೋಪಿತನು 5 ನೇ ಆರೋಪಿತನ ಬಳಿ ತಿಳಿಸಿದ್ದ ಎಂದು ಪೋಲಿಸರಿಂದ ನನಗೆ ತಿಳಿದು ಬಂತು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರೇಮಕುಮಾರನಿಗೂ ಹಾಗೂ 5 ನೇ ಆರೋಪಿಗೂ ಪರಿಚಯ ಇರುತ್ತದೆ ಹಾಗೂ ಈ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ. ಈ ಪ್ರಕರಣಕ್ಕೂ ಹಾಗೂ 5 ನೇ ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

S. C. No.10 /2019
PW.03

ಉತ್ತರಕನ್ನಡ, ಕಾರವಾರ